# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.08.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಇಂದು ಬೆಳಿಗ್ಗೆ 6.00 ಗಂಟೆಯಿಂದ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ತಪಾಸಣೆ ಕೈಗೊಂಡು, ವಾರ್ಡ್ ನಂ.178ರ 80 ಅಡಿ ರಸ್ತೆಯಲ್ಲಿ ಹಮ್ಮಿಕೊಳ್ಳಲಾದ ತೀವ್ರ ಸ್ವಚ್ಛತೆ ಕಾರ್ಯಕ್ರಮವನ್ನು ಪರಿಶೀಲನೆ ನಡೆಸಿದರು.

ಜೆ.ಪಿ.ನಗರ 1ನೇ ಹಂತದ 9ನೇ ಅಡ್ಡರಸ್ತೆಯಲ್ಲಿ ಶ್ರೀ ಅರುಣ್‌ಕುಮಾರ್ ಎಂಬುವವರಿಗೆ ಸೇರಿದ ಆಸ್ತಿ ಸಂಖ್ಯೆ: 47ರಲ್ಲಿ ಬಹುಮಹಡಿ ಅಂತಸ್ತಿನ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಕಟ್ಟಡ ಸಾಮಗ್ರಿಗಳನ್ನು ರಸ್ತೆ ಮೇಲೆ ಹಾಕಿ ವಾಹನ ಸಂಚಾರ ಮತ್ತು ಪಾದಚಾರಿಗಳಿಗೆ ಅಡಚಣೆ ಉಂಟು ಮಾಡುತ್ತಿರುವುದನ್ನು ಗಮನಿಸಿದ ಆಯುಕ್ತರು ಆಸ್ತಿ ಮಾಲೀಕರಿಗೆ ಒಂದು ಲಕ್ಷ ದಂಡ ವಿಧಿಸಲು ಆದೇಶ ನೀಡಿದರು.

ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಎನ್. ವಿಜಯಕುಮಾರ್ ರವರ ಜೊತೆಯಲ್ಲಿ ಸೌತ್ ಎಂಡ್ ಸರ್ಕಲ್ 4ನೇ ಮುಖ್ಯರಸ್ತೆಯಿಂದ ಜಯನಗರ 46ನೇ ಅಡ್ಡರಸ್ತೆಯವರೆಗಿನ ಮೆಟ್ರೋ ಮೇಲ್ಸೇತುವೆ ಕೆಳಭಾಗದಲ್ಲಿ ಹಾದುಹೋಗುವ ರಸ್ತೆ, ರಸ್ತೆಬದಿ ಮೋರಿ ಮತ್ತು ಲಕ್ಷ್ಮಣರಾವ್ ಬುಲೆ ವಾರ್ಡ್ ಉದ್ಯಾನವನದ ಪರಿಶೀಲನೆ ನಡೆಸಿದರು.

ಜಯನಗರ ಕ್ಷೇತ್ರದಲ್ಲಿ ಈ ರಸ್ತೆ ಬಹಳ ಪ್ರಮುಖ ರಸ್ತೆಯಾಗಿದ್ದು, ಲಕ್ಷ್ಮಣರಾವ್ ಬುಲೆ ವಾರ್ಡ್ ಉದ್ಯಾನವನದ ರಸ್ತೆಯನ್ನು ಇಡೀ ನಗರದಲ್ಲೇ ಅತ್ಯುತ್ತಮ ರಸ್ತೆಯನ್ನಾಗಿ ಪರಿವರ್ತಿಸಲು ಒಂದು ಕ್ರಿಯಾಯೋಜನೆ ರೂಪಿಸಲು ಪಾಲಿಕೆ ಆಯುಕ್ತರು ಮುಖ್ಯ ಅಭಿಯಂತರರಿಗೆ ಸೂಚನೆ ನೀಡಿದರು. ಕ್ರಿಯಾ ಯೋಜನೆಯಲ್ಲಿ ರಸ್ತೆ, ರಸ್ತೆ ಬದಿ ಮೋರಿ, ಬೀದಿದೀಪ ಮತ್ತು ಉದ್ಯಾನವನಗಳ ನಿರ್ವಹಣೆಯ ಅಂಶಗಳು ಕೂಡಿರಬೇಕೆಂದು ತಿಳಿಸಿದರು. ಈ ಅಭಿವೃದ್ಧಿ ಕಾಮಗಾರಿ ಮೆಟ್ರೋ ರೈಲು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಮುಗಿಸಬೇಕೆಂದು ಕೂಡಾ ತಿಳಿಸಿದರು.

ತದನಂತರ ವಾರ್ಡ್ ನಂ.179 ರಲ್ಲಿ ಜಯನಗರ 5ನೇ ಬ್ಲಾಕ್, 9ನೇ ಮುಖ್ಯರಸ್ತೆಯಲ್ಲಿ ರೂ.1.10 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಗತಿಯಲ್ಲಿರುವ ರಸ್ತೆಬದಿ ಮೋರಿ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು. ಈ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿದ್ದು, ಮೋರಿ ಮೇಲೆ ಹಾಕಿರುವ ಹಳೆ ಚಪ್ಪಡಿ ಕಲ್ಲುಗಳನ್ನೇ ಉಪಯೋಗಿಸಿ ನಿರ್ಮಿಸುತ್ತಿರುವುದನ್ನು ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಬಿ. ಸೋಮಶೇಖರ್ ರವರು ಆಯುಕ್ತರ ಗಮನಕ್ಕೆ ತಂದರು. ಇದನ್ನು ಗಮನಿಸಿದ ಪಾಲಿಕೆ ಆಯುಕ್ತರು ಕೂಡಲೇ ಈ ಕಾಮಗಾರಿ ಸ್ಥಗಿತಗೊಳಿಸಿ, ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಹೊಸದಾಗಿ ಟೆಂಡರ್ ಕರೆಯಲು ಮತ್ತು ಸಂಪೂರ್ಣ ಪರಿಶೀಲನೆಗಾಗಿ ಟಿ.ವಿ.ಸಿ.ಸಿ. ವಿಭಾಗಕ್ಕೆ ಒಪ್ಪಿಸಲು ಆದೇಶಿಸಿದರು. ಗುತ್ತಿಗೆದಾರರು ಮತ್ತು ಸಂಬಂಧಪಟ್ಟ ಅಭಿಯಂತರರು ಈ ರೀತಿಯ ಕರ್ತವ್ಯಲೋಪ ಎಸಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ಖಂಡಿತ ಶಿಸ್ತಿನ ಕ್ರಮ ಜರುಗಿಸುವುದಾಗಿ ತಿಳಿಸಿದರು.

ತದನಂತರ ಆಯುಕ್ತರು ವಾರ್ಡ್ ನಂ.170, ಜಯನಗರ ಪೂರ್ವದಲ್ಲಿ ಇಂದಿರಾಗಾಂಧಿ ಕೊಳಚೆ ಪ್ರದೇಶಕ್ಕೆ ಭೇಟಿ ನೀಡಿ, 9ನೇ ಬ್ಲಾಕ್ ಜಯನಗರದ 38ನೇ ಅಡ್ಡರಸ್ತೆಯನ್ನು ಅಭಿವೃದ್ಧಿಪಡಿಸಲು ಅಭಿಯಂತರರಿಗೆ ಸೂಚಿಸಿದರು.

ಜಯನಗರ 9ನೇ ಬ್ಲಾಕ್ 38ನೇ ಅಡ್ಡರಸ್ತೆಯಲ್ಲಿರುವ MEWA ಶಾಲೆ ಸುಮಾರು 3 ಎಕರೆಯಷ್ಟು ಆವರಣ ಹೊಂದಿದ್ದು, ಇಲ್ಲಿ ಹೆಚ್ಚಾಗಿ ಬಡ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಶಾಲೆಯ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ಶಾಲೆ ಆವರಣದಲ್ಲಿ ಮಳೆ ನೀರು ಸಂಗ್ರಹ ಘಟಕವನ್ನು ಪಾಲಿಕೆಯಿಂದಲೇ ನಿರ್ಮಿಸುವುದಾಗಿ ತಿಳಿಸಿದರು.

ಜಯನಗರ ವಿಧಾನಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲು ರಸ್ತೆಗಳ ಅಭಿವೃದ್ಧಿ, ಪಾದಚಾರಿ ಮಾರ್ಗ, ಉದ್ಯಾನವನ, ಆಟದ ಮೈದಾನ ಮತ್ತು ರಸ್ತೆಬದಿ ಹೆಚ್ಚಿನ ಮರಗಳನ್ನು ನೆಡಲು, ಮಳೆ ನೀರಿನ ಸಂಗ್ರಹಣೆ, ಮರಗಳ ಸಂರಕ್ಷಣೆಗಾಗಿ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಲು ಮತ್ತು ಈ ಕಾಮಗಾರಿಗಳನ್ನು ಗುಣಾತ್ಮಕವಾಗಿ ನಿರ್ವಹಿಸಬೇಕೆಂದು ಆಯುಕ್ತರು ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚಿಸಿದರು.

ನಂತರ ಜೆ.ಪಿ.ನಗರ 1ನೇ ಹಂತದ ಉದ್ಯಾನವನದಲ್ಲಿ ಶಾಸಕರು, ಆಯುಕ್ತರು, ಪಾಲಿಕೆ ಸದಸ್ಯರು ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಎನ್. ವಿಜಯಕುಮಾರ್, ಮಾಜಿ ಮಹಾಪೌರರಾದ ಶ್ರೀ ಎಸ್.ಕೆ. ನಟರಾಜ್, ಸ್ಥಳೀಯ ಪಾಲಿಕೆ ಸದಸ್ಯರುಗಳಾದ ಶ್ರೀ ಬಿ. ಸೋಮಶೇಖರ್, ಶ್ರೀ ಎನ್. ನಾಗರಾಜ್, ಶ್ರೀ ಮುನಿ ಸಂಜೀವಯ್ಯ ಹಾಗೂ ಪಾಲಿಕೆಯ ಹಿರಿಯ ಅಧಿಕಾರಿಗಳು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**